Auditing the Accounts of Co-operative Societies.

*Q.—121. Smt. B. L. SUBBAMMA (Chickmagalur).—

Will the Government be pleased to state :—

(*a*) whether it is a fact that the accounts of the Co-operative Societies are being audited by the Department itself;

(*b*) whether they intend to get the accounts of these societies audited by Accounts Department so as to maintain the accounts satisfactorily ?

A.—Sri K. PUTTASWAMY (Minister for Co-operation and Housing).—

(*a*) Yes.

(*b*) No.

12-30 P.M.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಇಲ್ಲವೆಂದು ಹೇಳಿದ್ದಾರೆ. ರಾಜ್ಯದ ಅಕೌಂಟ್ಸ್ ಇಲಾಖೆಯವರಿಂದ ಈ ಸಹಕಾರ ಸಂಘಗಳ ಲೆಕ್ಕಗಳನ್ನು ತನಿಖೆಮಾಡತಕ್ಕದ್ದು ಬಹಳ ಉತ್ತಮವಾದುದಾಗಿರುವುದರಿಂದ ಆ ಇಲಾಖೆ ಈಗೆ ಕೆಲಸವನ್ನು ವಹಿಸುವುದರಿಂದೇನು ತೊಂದರೆಯಾಗುತ್ತದೆ ?

†ಶ್ರೀ ಕೆ. ಪುಟ್ಟಸ್ವಾಮಿ.—ಈಗಿರುವ ಪ್ರಕಾರ ನಮ್ಮ ಇಲಾಖೆಯಲ್ಲಿಯೇ ಆಡಿಟ್ ಸಿಬ್ಬಂದಿ ಇದ್ದಾರೆ ? ಅದು ಸ್ವತಂತ್ರವಾದ ಸಿಬ್ಬಂದಿ. ಅವರು ಈಗಾಗಲೇ ನಮುರ್ಪಕವಾಗಿ ಆಡಿಟ್ ಮಾಡುತ್ತಿದ್ದಾರೆ. ಆದ್ದರಿಂದ ರಾಜ್ಯದ ಅಕೌಂಟ್ಸ್ ಇಲಾಖೆಗೆ ಈ ಕೆಲಸವನ್ನು ವಹಿಸುವ ಪ್ರಶ್ನೆ ಬರುವುದಿಲ್ಲ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಸಹಕಾರ ಸಂಘಗಳ ಆಡಳಿತ ನಮರ್ಪಕವಾಗಿಲ್ಲದೆ ಇರುವುದರಿಂದ ಅದನ್ನು ಅಕೌಂಟ್ಸ್ ಇಲಾಖೆಯಿಂದಲೇ ಆಡಿಟ್ ಮಾಡಬೇಕೆಂದು ರಾಜ್ಯದ ಇಕಾನಮಿ ಮತ್ತು ರಿಸೋರ್ಸಸ್ ಕಮಿಟಿಯವರು ಶಿಫಾರ್ಸು ಮಾಡಿರುವ ವಿಷಯವನ್ನು ಸರ್ಕಾರದವರ ಕಾರ್ಯಗತಮಾಡುವ ಇಚ್ಛೆ ಇಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಇಲ್ಲ. A State Level Joint Director, in charge of audit is there. There are District Co-operative Officers, Special Auditor and also Senior and Junior auditors. There is no need to transfer this duty to the State Accounts Department.

———

Fixation of price for Jowar and paddy.

*Q.—190. Sri V. S. LAKSHMIKANTHAPPA (Sagar).—

Will the Government be pleased to state :—

(*a*) the reasons for the difference of Rs. 13 between support price and purchase price of Jowar and only Rs. 2.50 in case of paddy ;

(*b*) the specific factors taken into consideration for the fixation of support price and purchase price of jowar and paddy;

A.—Sri B. D. JATTI (Minister for Food).—

(*a*) and (*b*) The minimum support prices and the purchase prices for jowar and paddy have been fixed by the State Government in consultation with the Government of India. While fixing these prices, several factors as noted below were taken into consideration :—

(a) the cost of production ;

(b) the level of prices over a period of time ;

(c) marketing and processing costs ; and

(d) the interests of the consumers and the producers.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ನನ್ನ ಪ್ರಶ್ನೆಗೆ ಉತ್ತರವಾಗಿ ಸಹಾಯಕ ಮತ್ತು ಕೊಳ್ಳುವ ಬೆಲೆಗಳನ್ನು ನಿಗದಿಮಾಡುವಾಗ ಉತ್ಪಾದನ ವೆಚ್ಚ, ಒಂದು ಕಾಲದ ಅವಧಿಯಲ್ಲಿನ ಬೆಲೆಗಳ ಮಟ್ಟ, ಮಾರುಕಟ್ಟೆಯ ಹಾಗೂ ಸಾಗಾಣಿಕೆಯ ವೆಚ್ಚಗಳು ಮತ್ತು ಬಳಕೆದಾರರ ಹಾಗೂ ಉತ್ಪಾದಕರ ಹಿತದೃಷ್ಟಿಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದು ಎಂಬುದಾಗಿ ಹೇಳಿದ್ದಾರೆ. ಬತ್ತಕ್ಕೆ ಸಹಾಯಕ ಬೆಲೆಯನ್ನು ಯಾವ ರೀತಿ ನಿಗದಿ ಮಾಡಿದ್ದಾರೆ ? ಅದೇ ರೀತಿ ಕೊಳ್ಳುವ ಬೆಲೆಯನ್ನು ನಿಗದಿಮಾಡುವಾಗ ಅಲ್ಲಿಯ ಮಾರ್ಕೆಟ್ ಕಂಡೀಷನ್ಸ್ ಮತ್ತು ಬಳಕೆಗಾರರ ಹಿತದೃಷ್ಟಿಯನ್ನು ನೋಡದೆ ಮಾರ್ಕೆಟ್ಟಿನ ಬೆಲೆಗಿಂತ ಬಹಳ ಕಡಮೆ ದರದಲ್ಲಿ ಬತ್ತವನ್ನು ಕೊಳ್ಳಬೇಕೆಂದು ಮಾಡಿರುವ ಕಾರಣವೇನು ?

†ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರೇ ಆ ಪ್ರಶ್ನೆಗೆ ಉತ್ತರ ಹೇಳಿದ್ದಾರೆ. ಆ ನಾಲ್ಕು ಧ್ಯೇಯಗಳನ್ನು ನೋಡಿಕೊಂಡೇ ಸರ್ಕಾರದವರು ನಿರ್ಣಯಮಾಡಿದ್ದಾರೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಹಾಗಾದರೆ ಜೋಳಕ್ಕೆ ನಿಗದಿಮಾಡಿರುವ ಸಹಾಯಕ ಬೆಲೆ 36 ರಿಂದ 39 ರೂಪಾಯಿಗಳು, ಬತ್ತಕ್ಕೆ ನಿಗದಿಮಾಡಿರುವ ಬೆಲೆ 42 ರಿಂದ 49 ರೂಪಾಯಿಗಳೆಂದು ಹೇಳುವಾಗ ಖರೀದಿ ಬೆಲೆಯನ್ನು ನಿಗದಿಮಾಡುವಾಗ ಇವೆರಡರ ನಡುವೆ ವ್ಯತ್ಯಾಸ 13 ರೂಪಾಯಿಗಳು, ಜೋಳದ ಸಂಬಂಧದಲ್ಲಿಯೂ 2½ ರೂಪಾಯಿಗಳು ಬತ್ತದ ಸಂಬಂಧದಲ್ಲಿಯೂ ಕಾಣುತ್ತಿದೆ. ಬತ್ತದ ಅವಶ್ಯಕತೆ ಈಗ ಜಾಸ್ತಿ ಇರುವಾಗ ಅದರ ಅಭಾವ ಹೆಚ್ಚಾಗಿದೆ ಎಂದು ಕಾಣುವಾಗ ರೈತರಿಗೆ ಅದನ್ನು ಬೆಳೆಯುವುದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದಿರುವಾಗ ಅದರ ಸಹಾಯಕ ಬೆಲೆಗೂ ಮತ್ತು ಕೊಳ್ಳುವ ಬೆಲೆಗೂ ಇಷ್ಟು ವ್ಯತ್ಯಾಸವನ್ನು ಮಾಡಿರುವ ಕಾರಣವೇನು ?

ಶ್ರೀ ಬಿ. ಡಿ. ಜತ್ತಿ.—ಕೆಂಪು, ಹಳದಿ ಮತ್ತು ಬಿಳೀ ಜೋಳಗಳ ಸಹಾಯಕ ಬೆಲೆ ಕ್ರಮವಾಗಿ 37, 38 ಮತ್ತು 39 ರೂಪಾಯಿಗಳು. ಅವುಗಳನ್ನು ಕೊಳ್ಳುವ ಬೆಲೆ 48, 50 ಮತ್ತು 52 ರೂಪಾಯಿಗಳು ಆದರೆ ಜೋಳದ ಬೆಲೆಗೂ ಮತ್ತು ಬತ್ತದ ಬೆಲೆಗೂ ಹೋಲಿಸಿ ನೋಡಿದರೆ ವ್ಯತ್ಯಾಸ ವೇನೋ ಕಾಣುತ್ತದೆ. ಈ ಪದಾರ್ಥಗಳ ಬಗ್ಗೆ ಮುಂದಿನ ಸಾರಿ ಬೆಲೆಗಳನ್ನು ನಿಗದಿಮಾಡುವ ಕಾಲಕ್ಕೆ ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳಲಾಗುತ್ತದೆ.

ಶ್ರೀ ಸಂಜೀವನಾಥ ಐಕಳ.—ಒಂದು ಕ್ವಿಂಟಾಲಿಗೆ ಮಾರ್ಕೆಟ್ ರೇಟ್ ಬತ್ತಕ್ಕೆ 70-80 ರೂಪಾಯಿಗಳಿಂತಲೂ ಸಹಾಯಕ ಬೆಲೆ ಕೇವಲ 37—38 ರೂಪಾಯಿಗಳಿಂತಲೂ ಈಗ ಇರುವುದರಿಂದ ಇವರ ಒಂದು ತತ್ವಕ್ಕೆ ಯಾವುದೂ ಸರಿ ಹೋಗುವುದಿಲ್ಲ. ಕಾರಣವೇನು ?

ಶ್ರೀ ಬಿ. ಡಿ. ಜತ್ತಿ.—ಕೊಂಡುಕೊಳ್ಳುವ ಬೆಲೆಗೂ ಸಹಾಯಕ ಬೆಲೆಗೂ ಯಾವ ತರಹ ಸಂಬಂಧವೂ ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ಸಹಾಯಕ ಬೆಲೆ ಮತ್ತು ಕೊಳ್ಳುವ ಬೆಲೆಗಳ ಮಧ್ಯೆ ಜೋಳ ಹಾಗೂ ಬತ್ತದ ಬೆಲೆಗಳನ್ನು ನಿಗದಿಮಾಡುವಾಗ ಇಷ್ಟು ವ್ಯತ್ಯಾಸವನ್ನು ಮಾಡುವುದಕ್ಕೆ ಇದ್ದಂಥ ಮುಖ್ಯವಾದ ಕಾರಣವೇನು ?

ಶ್ರೀ ಬಿ. ಡಿ. ಜತ್ತಿ.—ಈಗ್ಗೆ 2-3 ವರ್ಷಗಳಿಂದ ಮಾರ್ಕೆಟ್ಟಿನಲ್ಲಿ ಯಾವ ಬೆಲೆಗೆ ಜೋಳ ಮತ್ತು ಬತ್ತವನ್ನು ಮಾರುತ್ತಿದ್ದಾರೆಂಬುದನ್ನು ಸರ್ಕಾರದವರು ಲಕ್ಷ್ಯದಲ್ಲಿಟ್ಟುಕೊಂಡು ಈ ರೀತಿ ಮಾಡಿದ್ದಾರೆ. ಸದಸ್ಯರಿಗೆ ಇದು ಹೆಚ್ಚು ವ್ಯತ್ಯಾಸವಿದೆಯೆಂದು ಕಾಣುತ್ತಿದೆ ಎಂದು ಕಾಣುತ್ತದೆ. ನಮಗೂ ಹಾಗೆಯೇ ಕಾಣುತ್ತಿದೆ. ಆದ್ದರಿಂದ ಮುಂದಿನ ಸಾರಿ ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಅವುಗಳ ಬೆಲೆಗಳನ್ನು ನಿರ್ಧಾರ ಮಾಡಲಾಗುತ್ತದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಆ ಪದಾರ್ಥಗಳ ಬಗ್ಗೆ ಸಹಾಯಕ ಬೆಲೆಯನ್ನು ನಿಗದಿಮಾಡುವ ಅವಶ್ಯಕತೆಯೇನು ? ಅದು ಇಲ್ಲದಿದ್ದರೆ ನಡೆಯುವುದಿಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಸಹಾಯಕ ಬೆಲೆಯನ್ನು ನಿಗದಿಮಾಡುವ ಕಾರಣ ಮಾರ್ಕೆಟ್ ಬೆಲೆ ಕಡಿಮೆ ಇದ್ದರೆ ಜನಗಳಿಗೆ ಹಾನಿಯಾಗಬಾರದೆಂಬ ದೃಷ್ಟಿಯಿಂದ ಮಾಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ರೈತರಿಂದ ಈ ಪದಾರ್ಥಗಳನ್ನು ಕೊಳ್ಳುವ ಬೆಲೆಗೂ ಅವರ ಉತ್ಪಾದನ ಬೆಲೆಗೂ ಸುಮಾರು ಒಂದು ಕ್ವಿಂಟಾಲಿಗೆ 20 ರೂಪಾಯಿಗಳವರೆಗೂ ವ್ಯತ್ಯಾಸವಿರುವುದಲ್ಲದೆ ಅವುಗಳ ಸಾಗಾಣಿಕೆಯ ಖಿಷನರಿಗಳಿಗೆ ಸುಮಾರು 25 ರೂಪಾಯಿಗಳವರೆಗೆ ಖರ್ಚಾಗುತ್ತಿದೆ. ಇದರಿಂದ ಕರ್ಣ್ಯೂಮರ್ಸ್‌ಗೆ ಸಹಾಯಕ ಬೆಲೆಗೂ ಮತ್ತು ಕೊಳ್ಳುವ ಬೆಲೆಗೂ ಹೆಚ್ಚಿನ ಅಂತರವುಂಟಾಗಿ ತೊಂದರೆಯಾಗುವ ಸನ್ನಿವೇಶ ಬಂದಿಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಬಂದಿದೆ.

ಶ್ರೀ ವಿ. ಎಸ್. ಪಾಟೀಲ್.—ಆಹಾರ ಬೆಳೆಯುತಕ್ಕ ರೈತನಿಗೆ ಸಹಾಯಕ ಬೆಲೆ ಅಷ್ಟಾಗಿ ಪ್ರೋತ್ಸಾಹಕರವಾಗಿಲ್ಲವೆಂಬುದಕ್ಕೆ ಅವನಿಗೇನು ಜಾಗ್ರತೆಯಾಗಿ ಸರ್ಕಾರದವರ ರಕ್ಷಣೆ ಸಿಕ್ಕಿಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಆ ವಿಚಾರವನ್ನು ಅನೇಕರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಮುಂದಿನ ಸಾರಿ ವಿಚಾರ ಮಾಡಲಾಗುತ್ತದೆ.

ಶ್ರೀ ಬಿ. ಚನ್ನಬೈರೇಗೌಡ.—ಸರ್ಕಾರ ರೈತರಿಂದ ಈ ಆಹಾರ ಪದಾರ್ಥಗಳನ್ನು ಕೊಂಡು ಕೊಳ್ಳುವ ದರಕ್ಕೂ ಮಾರಾಟ ಮಾಡುವ ದರಕ್ಕೂ ಬಹಳವಾದ ಅಂತರವನ್ನು ಕಟ್ಟುಮಾಡಿ ಅವನ್ನು ಮಾರುವ ಹೊಣೆಯನ್ನು ವರ್ತಕರ ಕೈತಪ್ಪಿಸಿ ಸರ್ಕಾರದವರೇ ಪ್ರತಿ ಕ್ವಿಂಟಾಲಿಗೆ 30 ರೂಪಾಯಿಗಳಷ್ಟು ಲಾಭ ತೆಗೆದುಕೊಳ್ಳುವುದು ಸರಿಯೇ ?

ಶ್ರೀ ಬಿ. ಡಿ. ಜತ್ತಿ.—ಸರ್ಕಾರಕ್ಕೆ ಲಾಭ ಬರುತ್ತದೆ ಎಂದು ಹೇಳಲಿಲ್ಲ. ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಈಗ ಬತ್ತದ ಉತ್ಪಾದನೆ ಹೆಚ್ಚು ಹೆಚ್ಚು ಇರುವುದನು ಕಂಡು ಮುಂದಿನ ಸಾರಿಯಾದರೂ ಈಗಿರತಕ್ಕ ಮಿನಿಮಂ ರೇಟನ್ನು ಹೆಚ್ಚು ಮಾಡುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ಈಗಾಗಲೇ ಅದಕ್ಕೆ ಉತ್ತರ ಹೇಳಿದ್ದೇನೆ. ಮಾನ್ಯ ಸದಸ್ಯರು ಹೇಳಿದ ಸಲಹೆಯನ್ನು ಸಹ ಮುಂದಿನ ಸಾರಿ ವಿಚಾರ ಮಾಡುತ್ತೇವೆ.

ಶ್ರೀ ವಿ. ಮಸಿಯಪ್ಪ.—ಬತ್ತ ಮತ್ತು ಜೋಳದ ಸಹಾಯಕ ಬೆಲೆಗಳನ್ನು ನಿಗದಿಮಾಡುವ ಸಂದರ್ಭದಲ್ಲಿ ಉತ್ಪಾದನ ವೆಚ್ಚ That is one of the points for Consideration ಎಂದು ಉತ್ತರದಲ್ಲಿ ಅಪ್ಪಣೆ ಕೊಡಿಸಿದ್ದಾರೆ, ಅಂದ ಮೇಲೆ ಸರ್ಕಾರದವರಲ್ಲಿ ಏನಾದರೂ ಆಂಕ ಅಂಶಗಳಿದ್ದರೆ ಬತ್ತದ ಮತ್ತು ಜೋಳದ ಉತ್ಪಾದನಾ ಖರ್ಚು ಒಂದು ಕ್ವಿಂಟಾಲಿಗೆ ಏನಾಗುತ್ತದೆ ? ಅದನ್ನು ಯಾವ ಆಧಾರದ ಮೇಲೆ ನಿರ್ಧಾರಮಾಡಿದ್ದಾರೆ ?

ಶ್ರೀ ಬಿ. ಡಿ. ಜತ್ತಿ.—ಕೇಂದ್ರ ಸರ್ಕಾರದಲ್ಲಿ ತಜ್ಞರ ಸಮಿತಿಯೊಂದಿದೆ. ಅವರು ಎಲ್ಲಾ ಲೆಕ್ಕಗಳನ್ನು ಇಟ್ಟಿದ್ದಾರೆ. ಅವರು ಕೊಳ್ಳತಕ್ಕ ಬೆಲೆಯನ್ನು ತೆಗೆದುಕೊಂಡು ನಾವು ನಿರ್ಧಾರ ಮಾಡಿದ್ದೇವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಕೊಳ್ಳುವ ಬೆಲೆಗೂ ಮಾರುವ ಬೆಲೆಗೂ ಈಗ ಬಹಳ ವ್ಯತ್ಯಾಸವಾಗಿದೆ. ಇದರಿಂದ ರೈತರಿಗೆ ಹೆಚ್ಚು ಲಾಭ ಬರುವುದಿಲ್ಲವಾದ್ದರಿಂದ ಅವರಿಗೆ ಇದರಿಂದಾಗತಕ್ಕ ನಷ್ಟವನ್ನು ಸರ್ಕಾರದವರು ಬೋನಸ್ ರೂಪದಲ್ಲಿ ಸರಿದೂಗಿಸುವುದಕ್ಕೆ ಏರ್ಪಾಡುಮಾಡುತ್ತಾರೆಯೇ?

ಶ್ರೀ ಬಿ. ಡಿ. ಜತ್ತಿ.—ರೈತರಿಗೆ ಹೆಚ್ಚು ಅನುಕೂಲವಾಗುವ ದೃಷ್ಟಿಯಿಂದ "No profit, no loss, basis" ಮೇಲೆ ಬೆಲೆಗಳನ್ನು ನಿರ್ಧಾರ ಮಾಡಬೇಕೆಂದು ತೀರ್ಮಾನ ಮಾಡರಾಗಿದೆ. ಅದನ್ನು ಮುಂದಿನ ಸಾರಿ ವಿಚಾರ ಮಾಡುತ್ತೇವೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಇವುಗಳ ಬೆಲೆಗಳನ್ನು ನಿಗದಿ ಮಾಡುವಾಗ ಮುಂದೆ ಅಂತರ ಜಾಸ್ತಿ ಇಲ್ಲದಹಾಗೆ ಮಾಡುತ್ತೇವೆಂದು ಮಂತ್ರಿಗಳು ಹೇಳಿದರು. ಈಗಾಗಲೆ ಲೆವಿ ವಸೂಲಾಗಿರುವುದರಿಂದ ಜೋಳದ ಬೆಳೆಗಾರರಿಗೆ ಕೊಟ್ಟಹಾಗೆ ಬತ್ತದ ಬೆಳೆಗಾರರಿಗೂ ಹೆಚ್ಚಿನ ಬೆಲೆಯನ್ನು ನಿಗದಿಮಾಡಿ ಈಗಿರತಕ್ಕ 22—23 ರೂಪಾಯಿಗಳು ಒಂದು ಕ್ವಿಂಟಾಲಿಗೆ ವ್ಯತ್ಯಾಸವಿರುವುದನ್ನು ಅವರಿಗೆ ಬೋನಸ್ ರೀತಿಯಲ್ಲಿ ಕೊಡುವುದಕ್ಕೆ ಸರ್ಕಾರ ಒಪ್ಪುತ್ತದೆಯೇ ?

ಶ್ರೀ ಬಿ. ಡಿ. ಜತ್ತಿ.—ಈಗಾಗಲೇ ನಿಗದಿಯಾದ ಬೆಲೆಗಳಲ್ಲಿ ಈ ವರ್ಷದ ಮಟ್ಟಿಗೆ ಯಾವ ವ್ಯತ್ಯಾಸವನ್ನೂ ಮಾಡುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಬೆಲೆಗಳನ್ನು ನಿಗದಿಮಾಡುವಾಗ ನಾಲ್ಕು ಅಂಶಗಳನ್ನು ಗಮನಕ್ಕೆ ತೆಗೆದು ಕೊಳ್ಳುತ್ತೇವೆಂದು ಹೇಳುವಾಗ ಮಾರ್ಕೆಟ್ ಇಂಪ್ರೂವ್‌ಮೆಂಟಿಗೆ ಸಂಬಂಧಪಟ್ಟ ಬ್ಯೆಲಾಗಳನ್ನೂ ಕೂಡ ಸ್ವಲ್ಪ ಗಣನೆಗೆ ತೆಗದುಕೊಳ್ಳುವುದು ಸೂಕ್ತವಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಸೂಕ್ತ ಇದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬತ್ತದ ಸಹಾಯಕ ಬೆಲೆಯನ್ನು ಬಹಳ ಕಡಿಮೆಯಾಗಿ ಮಾಡಿರುವುದರಿಂದ ರೈತರಲ್ಲಿ ಬಹಳ ಕಳವಳವನ್ನುಂಟುಮಾಡಿದೆ. ಅದಕ್ಕಾಗಿ ಬತ್ತದ ಸಹಾಯಕ ಬೆಲೆಯನ್ನು ಈಗ ಜಾಸ್ತಿ ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಈ ವರ್ಷ ಹೆಚ್ಚು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಸರ್ಕಾರ ಬತ್ತ ಕೊಂಡುಕೊಳ್ಳುವ ಬೆಲೆ ಕಡಮೆ ಎನ್ನುವುದನ್ನು ಮನಗಂಡು ರಾಜ್ಯಸರ್ಕಾರದವರು ರೈತರಿಗೆ ಪ್ರತಿ ಕ್ವಿಂಟಾಲಿಗೆ ಐದು ರೂಪಾಯಿಗಳ ಬೋನಸ್ ಕೊಡುತ್ತೇವೆಂದು ಒಪ್ಪಿಕೊಂಡನಂತರ ಮಾನ್ಯ ಮುಖ್ಯಮಂತ್ರಿಗಳು ತೀರ್ಥಹಳ್ಳಿಗೆ ಪ್ರವಾಸ ಬಂದಾಗ ಇನ್ನೂ ಐದು ರೂಪಾಯಿಗಳನ್ನು ಕೊಡುತ್ತೇವೆಂದು ಭರವಸೆ ಕೊಟ್ಟದ್ದು ನಿಜವಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಅದು ಸರಿಯಿಲ್ಲ. ನಾನು ಹಾಗೆ ಹೇಳಲಿಲ್ಲ. If I have said it, I will certainly have it implemented.

ಶ್ರೀ ಎಸ್. ನುಚ್ಚಯ್ಯನಾಯಕ್.—ಈಗಿರತಕ್ಕ ಸರ್ಕಾರದ ಪಾಲಸಿಯನ್ನು ಬದಲಾವಣೆಮಾಡಿ ಈ ಪದಾರ್ಥಗಳನ್ನು ಕೊಳ್ಳುವ ಬೆಲೆಗೂ ಮತ್ತು ವಿತರಣೆ ಮಾಡುವ ಬೆಲೆಗೂ ಇರತಕ್ಕ ಬಹಳ ಅಂತರವನ್ನು ಕಡಿಮೆ ಮಾಡುವುದಕ್ಕಾಗುತ್ತದೆಯೇ ?

ಶ್ರೀ ಬಿ. ಡಿ. ಜತ್ತಿ.—ಆ ವಿಚಾರಗಳನ್ನು ಬಹಳ ಬುದ್ಧಿವಂತರಲ್ಲಿ ವಿಚಾರ ಮಾಡಿದ್ದೇವೆ. ಈಗಿರುವುದಕ್ಕಿಂತಲೂ ಬೆಲೆಯನ್ನು ಈಗ ಕಡಮೆ ಮಾಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರೇನಾದರೂ ಆ ಬಗ್ಗೆ ಸಲಹೆಗಳನ್ನು ಕೊಟ್ಟರೆ ಅವನ್ನು ಸರ್ಕಾರದವರು ಸ್ವೀಕಾರ ಮಾಡುವುದಕ್ಕೆ ಸಿದ್ಧ.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಈ ದೇಶದಲ್ಲಿ ಒಂದು ಕ್ವಿಂಟಾಲ್ ಬತ್ತವನ್ನು ಕೊಳ್ಳುವ ಮತ್ತು ಅದನ್ನು ಸರ್ಕಾರ ಮಾರುವ ಬೆಲೆಗಳ ನಡುವೆ 23 ರೂಪಾಯಿಗಳ ವ್ಯತ್ಯಾಸವಿದೆ. ಈ ಹಣವನ್ನು ನುಮ್ಮನೆ ಮಧ್ಯವರ್ತಿಗಳು ತಿನ್ನುವಂತೆ ಮಾಡುವ ಬದಲು ಈ ಉದ್ಯೋಗವನ್ನು ನೀವು ಬೇರೆ ಯಾರಿಗಾದರೂ ಬಿಟ್ಟುಕೊಡುವುದು ಒಳ್ಳೆಯದಲ್ಲವೆ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಆ ಉದ್ಯೋಗವನ್ನು ಮಾಡುವುದಾದರೆ ಅದನ್ನು ಅವರಿಗೆ ವಹಿಸುತ್ತೇವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ಧಪ್ಪ.—ಓಹೋ, ವಹಿಸಿಕೊಡಿ, ನಿಮಗಿಂತ ನೂರುಪಾಲು ಚೆನ್ನಾಗಿ ಮಾಡುತ್ತೇವೆ.

Mr. SPEAKER —The Chair is not going to be the agent for bringing about a contract between the two.

ಶ್ರೀ ಬಿ. ಕೆ. ಪುಟ್ಟಯ್ಯ.—ಜೋಳದ ಸಂಬಂಧದಲ್ಲಿ ಸಹಾಯಕ ಬೆಲೆ ಮತ್ತು ಕೊಳ್ಳುವ ಬೆಲೆಗಳ ನಡುವೆ ವ್ಯತ್ಯಾಸ 13 ರೂಪಾಯಿಗಳಿದ್ದು ಬತ್ತದ ಸಂಬಂಧದಲ್ಲಿ 2.50 ರೂಪಾಯಿಗಳು ಮಾತ್ರ ಇದೆ ಆದ್ದರಿಂದ ಬತ್ತಕ್ಕೆ 10 ರೂಪಾಯಿಗಳನ್ನು ಜಾಸ್ತಿ ಕೊಡಬಹುದಾಗಿತ್ತಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಈಗಾಗಲೇ ನಾನು ಆ ವಿಚಾರವನ್ನು ಹೇಳಿದ್ದೇನೆ. ಸ್ವಲ್ಪ ವ್ಯತ್ಯಾಸ ಆಗಿದೆ. ಆ ವ್ಯತ್ಯಾಸವನ್ನು ಕಡಿಮೆ ಮಾಡುವುದಕ್ಕೆ ಮುಂದಿನ ಸಲ ವಿಚಾರ ಮಾಡಿ ನಿರ್ಣಯ ಮಾಡುತ್ತೇನೆ.

Procurement of Jowar and Paddy.

*Q.—238. Sri SIDDIAH KASHIMATH (Shirahatti).—

Will the Government be pleased to state :—

(*a*) The quantity of Jowar and Paddy collected so far in Dharwar District as per levy procurement order (Taluk-wise information may be furnished) ;

(*b*) the action taken by them for the early collection of Jowar and Paddy in the Taluks of Dharwar District where collection is less ?

A.—Sri B. D. JATTI (Minister for Food).—

(*a*) the appended statement shows the quantities of Jowar and Paddy procured up to 2nd February 1966 in each taluk of Dharwar District.

(*b*) Special Staff has been deputed to each Taluk and the Tahsildars have been instructed to utilise the services of all the staff in the Taluk Offices for expediting procurement work. The Assistant Commissioners have also been requested to undertake rapid tours in their Sub-Divisions and to supervise the procurement work.

(SRI B. D. JATTI)

Statement showing the progressive procurement up to 2nd February 1966 in Dharwar District.

Sl. No.	Name of the Taluk.	Paddy		Jowar	
		Demand in Qntl., Kgs. as per levy Order.	Progressive purchases up to 2-2-1966.	Demand in Qntl., Kgs. as per levy Orders.	Progressive purchases up to 2-2-1966.
1	2	3	4	5	6
1	Dharwar ...	37,842 23	6,928 00	10,189 88	261 00
2	Hubli ...	2,979 47	1,350 00	8,682 00	3,610 00
3	Kalghatagi ...	69,644 70	11,140 00	1,920 00	20 00
4	Navalgund ...	...	...	5,061 53	900 00
5	Gadag ...	...	...	7,770 67	4,381 29
6	Ron ...	...	...	3,286 14	2,520 00
7	Mundaragi ...	57 84	...	5,341 74	700 00
8	Nargund ...	...	...	249 38	12 35
9	Shiggaon ...	33,463 43	4,890 00	7,813 68	1,810 00
10	Hangal ...	1,02,225 00	10,250 00	1,388 32	26 00
11	Kundagol ...	1,927 13	657 00	7,920 18	4,200 00
12	Shirahatti ...	29 48	7 77	10,718 64	7,070 00
13	Haveri ...	2,657 17	284 00	12,449 70	3,615 00
14	Byadagi ...	12,622 30	306 68	2,325 00	501 27
15	Ranibennur ...	54 75	...	10,300 00	857 81
16	Hirekerur ...	24,651 30	1,980 00	2,839 14	220 00
	Total ...	2,88,154 80	37,779 45	98,256 00	30,704 72

ಶ್ರೀ ಸಿದ್ಧಯ್ಯ ಕಾಶೀಮಠ.—ಧಾರವಾಡ ಜಿಲ್ಲೆಯಲ್ಲಿ ಹುಬ್ಬಳ್ಳಿ, ಗದಗ್ ಮತ್ತು ರೋಣ್ ಈ ತಾಲ್ಲೂಕುಗಳ ಪ್ರದೇಶದಲ್ಲಿ ಆಹಾರ ನಿಗ್ರಹಣಾ ವಸೂಲಾತಿ ಹೆಚ್ಚಿಗೆ ಆಗಿದೆ. ಕೆಲವು ಕಡೆ ಈ ಆಹಾರ ವಸೂಲಾತಿ ಸರಿಯಾಗಿ ಆಗದೆ ಉಳಿದಿರುವುದಕ್ಕೆ ಕಾರಣವೇನು ?

†ಶ್ರೀ ಬಿ. ಡಿ. ಜತ್ತಿ.—ಕೆಲವು ಕಡೆ ಬೆಳೆ ಚೆನ್ನಾಗಿ ಆಗಿಲ್ಲ. ಒಂದೆರಡು ಕಡೆ ಈ ಆಹಾರ ನಿಗ್ರಹಣಾ ವಸೂಲಾತಿಯ ವಿಷಯದಲ್ಲಿ ಕೆಲವು ಜನ ದೊಡ್ಡವರು ತೊಂದರೆ ಕೊಡುತ್ತಿದ್ದಾರೆ, ಇದರಿಂದ ಅಲ್ಲಿ ಆಹಾರ ವಸೂಲಾತಿಯು ಸ್ವಲ್ಪ ಕಷ್ಟವಾಗಿದೆ. ಅದನ್ನ ಸರಿಪಡಿಸುತ್ತೇವೆ.

ಶ್ರೀ ಸಿದ್ಧಯ್ಯ ಕಾಶೀಮಠ.—ತಾವು ಆಹಾರ ಲೆವಿಯನ್ನು ಡಿಮ್ಯಾಂಡ್ ಮಾಡುವಾಗ ಏನೇನು ನಿಯಮಗಳನ್ನು ಅನುಸರಿಸುತ್ತೀರಿ ?

ಶ್ರೀ ಬಿ. ಡಿ. ಜತ್ತಿ.—ಆಹಾರ ಲೆವಿಯನ್ನು ಡಿಮ್ಯಾಂಡ್ ಮಾಡುವಾಗ ಚೆನ್ನಾಗಿ ಬೆಳೆಯಾಗಿರುವ ಪ್ರದೇಶದಲ್ಲಿ ರೂಲ್ಸ್ ಪ್ರಕಾರ ಲೆವಿಯನ್ನು ವಸೂಲು ಮಾಡಬೇಕು, ಎಲ್ಲಿ ಕಡಿಮೆ ಬೆಳೆ ಆಗಿದೆಯೋ ಅಲ್ಲಿ ಕಡಿಮೆ ವಸೂಲು ಮಾಡಬೇಕು, ಏನೂ ಬೆಳೆ ಆಗದೆ ಇದ್ದರೆ ಏನೂ ವಸೂಲು ಮಾಡಕೂಡದೆಂದು ಅಧಿಕಾರಿಗಳಿಗೆ ಆದೇಶವನ್ನ ಕೊಟ್ಟಿದ್ದೇವೆ.

ಶ್ರೀ ಬಿ. ರಾಮೇ ಗೌಡ.—ಬೆಳೆ ಚೆನ್ನಾಗಿ ಆಗಿದ್ದರೆ ಜಾಸ್ತಿ ವಸೂಲು ಮಾಡುತ್ತೇವೆ, ಬೆಳೆ ಕಡಿಮೆ ಆಗಿದ್ದರೆ ಕಡಿಮೆ ವಸೂಲು ಮಾಡುತ್ತೇವೆಂದು ಹೇಳಿದಿರಿ, ಅದನ್ನ ಗೊತ್ತುಮಾಡತಕ್ಕ ಅಧಿಕಾರಿಗಳು ಯಾರು ?

ಶ್ರೀ ಬಿ. ಡಿ. ಜತ್ತಿ.—ಇದುವರೆಗೆ ಆ ಬಗ್ಗೆ ಡೆಪ್ಯುಟಿ ಕಮೀಷನರಿಗೆ ಸಂಪೂರ್ಣ ಅಧಿಕಾರವನ್ನು ಕೊಟ್ಟಿದ್ದೆವು. ಅವರು ಅದನ್ನ ನಿರ್ಧಾರ ಮಾಡಿ ಹೇಳುತ್ತಿದ್ದರು.

ಶ್ರೀ ಬಿ. ಚನ್ನಬೈರೇಗೌಡ.—ಚಿಂತಾಮಣಿಯಲ್ಲಿ ಒಬ್ಬರು ರೈತರು ಕಾನೂನು ಪ್ರಕಾರ ಕೊಡಬೇಕಾಗಿದ್ದ ಲೆವಿಯನ್ನ ಕೊಟ್ಟಿದರೂ ಸಹ ಅವರ ಕೈಗೆ ಬೇಡಿ ಹಾಕಿ ಕರೆದುಕೊಂಡು ಹೋದ ಪ್ರಸಂಗ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಅದು ನನಗೆ ಗೊತ್ತಿಲ್ಲ. ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸರ್ಕಾರದವರು ರೈತರಿಂದ ಬಹಳ ಕಡಿಮೆ ಬೆಲೆಗೆ ಬತ್ತವನ್ನು ಕೊಳ್ಳುತ್ತಾರೆ. ಆದರೆ ಬೆಂಗಳೂರಿನಲ್ಲಿ ಕೆಲವು ವರ್ತಕರು ಅಂಗಡಿಗಳಲ್ಲಿ ಕೇವಲ ತೂಕದ ಸಾಮಾನುಗಳನ್ನು ಇಟ್ಟುಕೊಂಡು ಒಂದು ಚೀಲಬತ್ತಕ್ಕೆ 7 ರೂ, 8 ರೂ,—10 ರೂಪಾಯಿಗಳ ವರೆಗೂ ಲಾಭ ಸಂಪಾದಿಸಿಕೊಂಡು ಒಂದು ವಾರಕ್ಕೆ 2-3 ಸಾವಿರ ರೂಪಾಯಿಗಳನ್ನು ಸಂಪಾದನೆ ಮಾಡುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಹೇಳುವುದು ಸರಿಯಿಲ್ಲ, ರೀಜೇಲರ್ಸ್ ಕಮಿಷನ್ ಹೆಚ್ಚಿಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಒಂದು ವೇಳೆ ಅವರು ಹೆಚ್ಚಿಗೆ ಕಮಿಷನ್ ತೆಗೆದು ಕೊಂಡರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

Sri R. N. LAKSHMI PATHY.—The Wholesale price is Rs. 72 and the retail price is 98. You Just Calculate the difference. What is the otal quantity of food stuffs you are supplying to such dealers ?

Sri B. D. JATTI.—The wholesale rate has been fixed after getting the quotations, and the lowest rate quoted by the tender has to be accepted.

ಶ್ರೀ ಸಂಜೀವನಾಥ ಐಕಳ.—ಈ ಲೆವಿ ಪದ್ಧತಿಯಲ್ಲಿ ಬತ್ತ ಮತ್ತು ಜೋಳವನ್ನು ಸಂಗ್ರಹ ಮಾಡಿದ್ದಕ್ಕೆ ಸರ್ಕಾರದವರು ಶ್ಯಾನುಭೋಗರು ಮತ್ತು ಪಟೇಲರಿಗೆ ಏನಾದರೂ ಲಂಚ ಕೊಡುತ್ತಾರೆಯೇ ?

Mr. SPEAKER.—It is disallowed.

Sri SANJEEVANATH AIKALA.—Is it not a fact that Government have given some sort of additional gratification amount to the Patels and Shanubhogues for having collected more paddy by way of levy ?

Sri B. D. JATTI.—The Government has fixed remuneration for the duties done by the Village officers. We have not fixed any additional gratification to the Village officers as stated by the Hon'ble member.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಮಾನ್ಯ ಸಚಿವರು ಒಂದು ದೊಡ್ಡ ಸುದ್ದಿಯನ್ನು ಈ ಸಭೆಗೆ ಕೊಟ್ಟಿದ್ದಾರೆ. ಕಮಿಷನ್ ಕೊಡುತ್ತೇವೆಂದು ಹೇಳಿದರು. ಇದುವರೆಗೆ ಕೊಚೇಶನ್ ಕರೆದು ಕೊಡುತ್ತಿದ್ದೇವೆ ಎಂದು ಹೇಳಿದರು. ಆ ಏಜೆಂಟರು ಯಾರು, ಯಾವ ಕಾನೂನು ಪ್ರಕಾರ ಅವರಿಗೆ ಡಿಪೋಗಳನ್ನು ಇಟ್ಟುಕೊಂಡು ಮಾರಾಟ ಮಾಡಬಹುದು ಎಂದು ಅವಕಾಶವನ್ನು ಕೊಟ್ಟಿದ್ದಾರೆ ಎಂಬುದನ್ನು ತಿಳಿಸುವುದಕ್ಕೆ ಸಾಧ್ಯವಿದೆಯೇ ?

Mr. SPEAKER.—How does it arise ? The question relates to the quantity of Jowar and Paddy collected so far in Dharwar District and the action taken by them for the early collection. The question of sale does not come under this.

Sri C. J. MUCKANNAPPA.—The Hon'ble Minister gave a long reply and has landed himself in difficulty.

Mr. SPEAKER.—He may land himself anywhere.

Shanthisagar Tank in Channagiri Taluk.

*Q.—325. Sri KUNDUR RUDRAPPA (Channagiri).—

Will the Government be pleased to state :—

(*a*) when Shanthisagar Tank was constructed in Channagiri Taluk of Shimoga District ;

(*b*) what was its water-spread area both by full tank level and maximum water level recorded and its capacity ;

(*c*) the atchkat commanded under the said tank and the revenue derived annually ?

A.—Sri ALUR HANUMANTHAPPA (Deputy Minister for Minor Irrigation).—

(*a*) This being a very old tank the year of Construction is not known.

(*b*) 1. Water Spread area at full tank level—7,340 Acres.
2. Full tank level—1982-78.
3. Capacity—10,054 units.
4. Maximum water level—1987-28.

(*c*) Rs. 4,125-05,
Rs. 9,844.

ಶ್ರೀ ಕುಂದೂರು ರುದ್ರಪ್ಪ.—ಸ್ವಾಮಿ, ಈ ಶಾಂತಿಸಾಗರ ಕೆರೆಯನ್ನು ಯಾವಾಗ ಕಟ್ಟಿದರು ಎಂಬುದು ನಮಗೆ ಗೊತ್ತಿಲ್ಲ ಎಂದು ಹೇಳುತ್ತೀರಿ, ಈ ಕೆರೆಯ ಸುತ್ತಳತೆ 92 ಎಕರೆ ವಿಸ್ತೀರ್ಣ ಇದೆ. ಇದರ ಅಂಕಿ ಸಂಖ್ಯೆಗಳು ಸರ್ಕಾರದಲ್ಲಿ ಇಲ್ಲವೇ ?

† ಶ್ರೀ ಆಲೂರು ಹನುಮಂತಪ್ಪ.—ಈ ಕೆರೆಯನ್ನು 11-12ನೇ ಶತಮಾನದಲ್ಲಿ ಕಟ್ಟಿರಬಹುದು ಎಂದು ಊಹಿಸಲಾಗಿದೆ. ಇದು ಪುರಾತನ ಕಾಲದ ಒಂದು ನರೋವರ.

ಶ್ರೀ ಕುಂದೂರು ರುದ್ರಪ್ಪ.—ಭಾರಿ ಮಳೆಬಂದಾಗ ಆಗಿಂದಾಗ್ಗೆ ಈ ಕೆರೆಯು ಸುತ್ತಲೂ ಇರತಕ್ಕ ಸುಮಾರು 20 ಗ್ರಾಮಗಳು ನೀರಿನಲ್ಲಿ ಮುಳುಗಡೆ ಆಗುತ್ತವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಮತ್ತು ಇದನ್ನು ತಾವು ಮತ್ತು ಮುಖ್ಯ ಮಂತ್ರಿಗಳು ಕಣ್ಣಾರೆ ನೋಡಿ ಕೊಂಡು ಬಂದಿರುವುದು ನಿಜವೇ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಹೇಳತಕ್ಕ ಅಂಶ ಸರಿ. ನಾನೂ ಸಹ ಮಳೆಗಾಲದಲ್ಲಿ ಅಲ್ಲಿಗೆ ಭೇಟಿ ಕೊಟ್ಟಿದ್ದೆ. ಮಾನ್ಯ ಮುಖ್ಯಮಂತ್ರಿಗಳೂ ಅಲ್ಲಿಗೆ ಭೇಟಿಕೊಟ್ಟಿದ್ದಾರೆ ಈಗಾಗಲೇ ಸರ್ಕಾರದವರು 29 ಲಕ್ಷ ರೂಪಾಯಿಗಳ ಫ್ಲಡ್ ಡ್ಯಾಮೇಜ್ ಪ್ರೊಜೆಕ್ಟ್‌ವ್ ವರ್ಕ್ಸ್ ಯೋಜನೆಯನ್ನು ಮಾಡಿದ್ದಾರೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಆ ಯೋಜನೆಯನ್ನು ಹೊಸದಾಗಿ ಮಾಡಬೇಕೆಂದು ಕೇಂದ್ರ ಸರ್ಕಾರದವರನ್ನ ಹಣವನ್ನು ಕೇಳಿದ್ದೇವೆ.

ಶ್ರೀ ಕುಂದೂರು ರುದ್ರಪ್ಪ.—ಇದೇ ವಿಚಾರದಲ್ಲಿ ಇದೇ ಸಭೆಯಲ್ಲಿ ತಾವು ಕೊಟ್ಟ ಉತ್ತರದಂತೆ ಇದಕ್ಕಾಗಿ 29 ಲಕ್ಷ ರೂಪಾಯಿಗಳ ಅಂದಾಜು ಮಂಜೂರಾಗಿದೆ ಇದಕ್ಕಾಗಿ ಸೆಂಟ್ರಲ್ ಗವರ್ನ್‌ಮೆಂಟಿನವರು ಗ್ರಾಂಟು ಮೂಲಕ ಪೂರೈಸಿ ಕೊಡುತ್ತಾರೆ ಎಂದು ಇದನ್ನು ಚೀಫ್ ಮಿನಿಸ್ಟರವರ ಸಲಹೆ ಪಡೆದು ನನಗೆ ಉತ್ತರ ಕೊಟ್ಟು ಕಳುಹಿಸಿರಲಿಲ್ಲವೇ, ಸ್ವಾಮೀ?

ಶ್ರೀ ಆಲೂರು ಹನುಮಂತಪ್ಪ.—ನಮಗೆ ಮೂರನೇ ಯೋಜನೆಯಲ್ಲಿ ತೆಗೆದುಕೊಳ್ಳಲು ಹಣ ಇರಲಿಲ್ಲ. ಫ್ಲಡ್ ಪ್ರೊಜೆಕ್ಟೀವ್ ವರ್ಕ್ಸ್ ಎಂದು 14,765 ಲಕ್ಷ ರೂಪಾಯಿಗಳ ಯೋಜನೆಯನ್ನು ಕೇಂದ್ರಕ್ಕೆ ಕಳುಹಿಸಿಕೊಡಲಾಗಿದೆ. ಇದರಲ್ಲಿ 29 ಲಕ್ಷ ರೂಪಾಯಿಗಳನ್ನು ಶಾಂತಿಸಾಗರದ ಮೇಲ್ಭಾಗದ ಯೋಜನೆಗೆ ಫ್ಲಡ್ ವರ್ಕ್ಸ್‌ಗಳಲ್ಲಿ ಒದಗಿಸಬೇಕೆಂದು ಸಲಹೆ ಕೂಡ ಮಾಡಲಾಗಿದೆ.

ಶ್ರೀ ಕೆ. ಲಕ್ಕಪ್ಪ —ಫ್ಲಡ್ ಡ್ಯಾಮೇಜು ವರ್ಕ್ಸ್‌ಗಳು ಎಂದು ಸರಕಾರ ಮಾಡಿದುದರಲ್ಲಿ 29 ಲಕ್ಷ ರೂಪಾಯಿಗಳ ಯೋಜನೆಯನ್ನು ಹೋದ ವರ್ಷ ಫ್ಲಡ್ ಕಂಟ್ರೋಲ್ ಬೋರ್ಡಿನವರಿಗೆ ಒದಗಿಸಿದ್ದರೂ ಆ ಹಣ ಲ್ಯಾಪ್ಸ್ ಆಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಅಲೂರು ಹನುಮಂತಪ್ಪ.—ನಮ್ಮ ಗಮನಕ್ಕೆ ಬಂದಿಲ್ಲ. ಆಲ್ಲದೆ ಫ್ಲಡ್ ಡ್ಯಾಮೇಜು ವರ್ಕ್ಸ್‌ಗಳಿಗಾಗಿ ಒದಗಿಸಿದ್ದ ಹಣ ಯಾವಾಗಲೂ ಲ್ಯಾಪ್ಸ್ ಆಗಿಲ್ಲ.

ಶ್ರೀ ಕುಂದೂರು ರುದ್ರಪ್ಪ.—ನಮ್ಮ ಮಾನ್ಯ ಉಪಮಂತ್ರಿಗಳನ್ನು ನಾನೇ ನಮ್ಮ ಭಾಗಕ್ಕೆ ಕರೆದುಕೊಂಡು ಹೋಗಿ ಅಲ್ಲಿನ ಜನಕ್ಕೆ ಆಗುವ ತೊಂದರೆಗಳನ್ನು ತೋರಿಸಿದಾಗ ಅವರು ಅಲ್ಲಿ ಎರಡು ದಿನಗಳು ಪ್ರವಾಸ ಮಾಡಿದಾಗ ಇಲ್ಲಿಗೆ ಆಗಬೇಕಾಗಿರುವ ಕೆಲಸಗಳನ್ನು ಅಪಷ್ಟು ಜಾಗ್ರತೆ ನಮ್ಮ ಏರಿಯಕ್ಕೆ ಮಾಡಿಸಿಕೊಡುತ್ತೇವೆ ಎಂದು ಹೇಳಿರುವುದು ಸರಕಾರದ ಗಮನಕ್ಕೆ ಬಂದಿರಲಿಲ್ಲವೇ?

ಶ್ರೀ ಆಲೂರು ಹನುಮಂತಪ್ಪ.—ಇಲ್ಲವೆನ ಕೆರೆಯ ಅಚ್ಚುಕಟ್ಟು 10,054 ಯೂನಿಟ್ಟುಗಳು. ಇದರಲ್ಲಿ ಇರಿಗೇಟಾಗಿರುವುದು ಸುಮಾರು 4,125 ಎಕರೆಗಳು ಮಾತ್ರ. ಆದರೆ ಇಲ್ಲಿಗೆ ಭದ್ರಾ ಚಾನಲ್ಲಿನಿಂದಲೂ ನೀರು ಬರುತ್ತದೆ. ಆದುದರಿಂದ ಇಲ್ಲಿಗೆ ಸರ್‌ಪ್ಲಸ್‌ಆಗಿ ಬರುವ ನೀರು ಡಿಪ್ಲೀಟ್ ಆಗಿ ಹೋಗಬಾರದು ಎಂದು ಫ್ಲಡ್ ಪ್ರೊಟೆಕ್ಷನ್ನನ್ನು ವರ್ಕ್ಸ್‌ಗಳಲ್ಲಿ ಇದನ್ನು ಸೇರಿಸಿ ಮಾಡಬೇಕೆಂದು ಸರಕಾರ ಯೋಚನೆ ಮಾಡಿದೆ. ಮತ್ತು ಹೊಳ್ಕೆರೆ ಭಾಗದಲ್ಲಿ ಹೆಚ್ಚು ಚಾನಲ್ ವರ್ಕುಗಳನ್ನು ತೆಗೆದುಕೊಂಡಾಗ ಅಲ್ಲಿಂದಲೂ ಹೆಚ್ಚು ನೀರು ಇಲ್ಲಿ ಬರಲು ಸಾಧ್ಯವಿದೆ. ಇದಕ್ಕಾಗಿ ಹೊಳ್ಕೆರೆಯಲ್ಲಿ ಈಗಾಗಲೇ ಐದು ಹೊಸ ಕೆಲಸಗಳನ್ನು ಸುಮಾರು 5 ಲಕ್ಷ, 7 ಲಕ್ಷ ಎಂದು ಕೆಲವು ಕೆಲಸಗಳನ್ನು ತೆಗೆದುಕೊಂಡು ಅದನ್ನು ಕಾರ್ಯಗತ ಮಾಡಬೇಕೆಂದಿದೆ.

ಶ್ರೀ ಕುಂದೂರು ರುದ್ರಪ್ಪ.—ನಮ್ಮ ಭಾಗದಲ್ಲಿ ಹತ್ತು ಸಾವಿರ ಎಕರೆಗಳಷ್ಟು ಭೂಮಿಗೆ ನೀರನ್ನು ಕೊಡಲು ಅವಕಾಶವಿದೆ, ಇದನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಪ್ರವಾಸ ಬಂದಿದ್ದಾಗ ಅವರಿಗೆ ಇಲ್ಲಿನ ರೈತಾಪಿ ಜನಗಳ ಕಷ್ಟವನ್ನು ಕಣ್ಣಾರೆ ತೋರಿಸಿದ್ದೇನೆ. ಅವರೂ ಕೂಡ ಇಲ್ಲಿ ಹೆಚ್ಚು ಆಹಾರ ಬೆಳೆಯಲು ಎಷ್ಟು ನೀರು ಬೇಕೋ ಅಷ್ಟನ್ನು ಉಪಯೋಗಿಸಿಕೊಳ್ಳಲು ಶಕ್ಯ ಕಾರ್ಯಕ್ರಮವನ್ನು ತೆಗೆದುಕೊಳ್ಳಲು ಬೇಗನೆ ಸಂಬಂಧಪಟ್ಟ ಇಲಾಖೆಯವರಿಗೆ ತಿಳಿಸುತ್ತೇನೆಂದು ಹೇಳಿ ಬಂದಿದ್ದರು. ಈ ಭರವಸೆ ಬರೀ ರಿಕಾರ್ಡು ಮೇಲೆ ಇರುತ್ತಿದೆಯೋ ಇಲ್ಲವೇ ರೈತರಿಗೆ ನಿಜವಾಗಿ ಅನುಕೂಲ ಮಾಡಲು ತಕ್ಕ ಕ್ರಮಗಳು ನಡೆದಿವೆಯೇ ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿರುವುದರಿಂದ ಅವರೇ ಇಲ್ಲಿ ಉತ್ತರ ಹೇಳಿದರೆ ನ್ಪಲ್ಪ ನನಗೆ ಸಮಾಧಾನವಾಗುತ್ತದ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಇದನು ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ರುದ್ರಪ್ಪನವರು ಹೇಳುವ ಮಾತಿನಲ್ಲಿ ಅರ್ಥವಿದೆ. ವ್ಯವಸಾಯಕ್ಕೆ ಅನುಕೂಲವಾಗತಕ್ಕ ಜಮೀನು ಇದ್ದರೆ ಅಂತಹ ಕಡೆಗೆ ನೀರನ್ನು ಕೊಡದೇ ಹೋದರೆ

(ಶ್ರೀ ಎಸ್. ನಿಜಲಿಂಗಪ್ಪ)

ಅವು ಅಭಿವೃದ್ಧಿಯಾಗುವುದಿಲ್ಲ. ಆಗಿಂದಾಗ್ಗೆ ಹೆಚ್ಚು ನೀರು ಬಂದು ಅವು ವ್ಯರ್ಥವಾಗಿ ಹೋಗುವುದ ಕ್ಕಿಂತ ಅವನ್ನು ಉಪಯೋಗ ಮಾಡಿಕೊಂಡರೆ ವ್ಯವಸಾಯ ಮಾಡಲು ಅನುಕೂಲವಾಗುತ್ತದೆ. ಅದಕ್ಕಾಗಿ ಎಷ್ಟು ಮಟ್ಟದವರೆಗೆ ನೀರನ್ನು ನಿಲ್ಲಿಸಬಹುದು ಮತ್ತು ಎಷ್ಟು ನೀರನ್ನು ಕೆಳಗೆ ಇರುವ ಜಮೀನಿಗೆ ಕೊಟ್ಟರೆ ಅನುಕೂಲವಾಗುತ್ತದೆ ಎನ್ನುವುದನ್ನು ವಿಚಾರ ಮಾಡಿ ಸರಿಯಾದ ರೀತಿಯಲ್ಲಿ ಇಲ್ಲಿನ ಜನಕ್ಕೆ ನೀರನ್ನು ಕೊಡಲು ಒಂದು ರಿಪೋರ್ಟನ್ನು ಸರಕಾರಕ್ಕೆ ಕಳುಹಿಸಬೇಕೆಂದು ಹೇಳಲಾಗಿದೆ.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಉಪಸಚಿವರು ಫ್ಲಡ್ ಜೋರ್ಡು ಕೆಲಸಗಳಿಗಾಗಿ ಫ್ಲಡ್ ಪ್ರೊಟೆಕ್ಷನ್ನು ವರ್ಕ್ಸ್‌ಗಳಲ್ಲಿ ಕೇಂದ್ರದಿಂದ ಸಹಾಯ ಪಡೆದರೂ ಯಾವ ಕೆಲಸಗಳನ್ನೂ ಮಾಡಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

Mr. SPEAKER.—It is disallowed.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಕೆರೆಯಲ್ಲಿ 10 ಸಾವಿರ ಯೂನಿಟ್ಸು ಇದೆ ಎಂದರೆ ಇದು ಬಹಳ ದೊಡ್ಡ ಕೆರೆಯೇ ಆಯಿತು. ಇಂತಹ ದೊಡ್ಡ ಕೆರೆಯ ಅಚ್ಚುಕಟ್ಟನ್ನು ಜಾಸ್ತಿ ಮಾಡಿ ಇಲ್ಲಿ ಒಂದು ಟೆಂಪರರಿ ರಿಸರ್ವಾಯರ್ ತರಹ ಇಟ್ಟುಕೊಂಡು ಭದ್ರಾ ಚಾನಲ್‌ನಿಂದ ಬರುವ ನೀರನ್ನೂ ಉಪಯೋಗಿಸುವುದಕ್ಕೆ ಆಗುವುದಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಇಲ್ಲ ಹೊಳಲ್ಕೆರೆ ಭಾಗದ ಕಡೆಯಿಂದಲೂ ನೀರು ಬರುತ್ತದೆ. ಅಲ್ಲದೆ ಆಗಿಂದಾಗ್ಗೆ ಹೊಳಲಕೆರೆ ಕ್ಷಾಮಕ್ಕೆ ತುತ್ತಾಗುತ್ತಿರುವ ಪ್ರದೇಶವಾಗಿರುವುದರಿಂದ ಇಲ್ಲಿ ಫ್ಲಡ್ ರಿಲೀಫ್ ವರ್ಕ್ಸ್‌ಗಳು ಎಂದು ಇಲ್ಲಿ ಕೆಲವು ಯೋಜನೆಗಳನ್ನು ಮಾಡಿ ಅಲ್ಲಿಂದ ಬರುವ ಚಾನಲ್ ನೀರನ್ನೂ ಇಲ್ಲಿ ಹೇಗೆ ಉಪಯೋಗಿಸಿಕೊಳ್ಳಲು ಸಾಧ್ಯ ಎನ್ನುವುದನ್ನೂ ಪರಿಶೀಲನೆ ಮಾಡುತ್ತಿದ್ದೇವೆ.

Works intended to be taken up under Minor Irrigation Scheme.

*Q.—74. Smt. G. C. BHAGEERATHAMMA (Tumkur).—

Will the Government be pleased to state :—

(*a*) the names of works intended to be taken up under Minor Irrigation Scheme in Tumkur Taluk during the IV Plan period ;

(*b*) the extent of land that would be irrigated and the extent of land going to be submerged under each one of the above works ?

A.—Sri ALUR HANUMANTHAP PA (Deputy Minister for Minor Irrigation).—

(*a*) Programme for the entire IV plan cannot be made in view of heavy spill-over works to be completed.

(*b*) Does not arise in view of reply to clause (*a*).

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಮುಗಿದಿರುವ ಕಾಮಗಾರಿಗಳಲ್ಲಿ ದೊಡ್ಡ ನೀರಾವರಿ ಯೋಜನೆಗಳು ನಮ್ಮ ತಾಲ್ಲೂಕಿನಲ್ಲಿ ಯಾವ ಯಾವುವು ಆಗಿವೆ ತಿಳಿಸುತ್ತೀರಾ ?

†ಶ್ರೀ ಆಲೂರು ಹನುಮಂತಪ್ಪ.—ಇದರ ವಿವರಗಳ ಪಟ್ಟಿಬೇಕಾದರೆ ಕೊಡುತ್ತೇನೆ. ಹಳೆಯ ಕೆಲಸಗಳನ್ನು ಮುಗಿಸಿ ಇತ್ತೀಚೆಗೆ ಹೊಸ ಕೆಲಸಗಳನ್ನು ಮಾಡಲು ಹಣವನ್ನು ಸರಕಾರ ಮಂಜೂರು ಮಾಡಿದೆ ಮತ್ತು ಇದರಲ್ಲಿ ಒಂದೆರಡು ಕೆಲಸಗಳು ಈಗಾಗಲೇ ಮುಗಿದಿವೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಹೊಸ ಕೆಲಸಗಳು ಯಾವ ಯಾವುವು ?

ಶ್ರೀ ಆಲೂರು ಹನುಮಂತಪ್ಪ.—ನತ್ಯಮಂಗಲ ಟ್ಯಾಂಕ್ ರೆಸ್ಟೊರೇಷನ್ ಕೆಲಸ ನುಮಾರು 59,700 ರೂಪಾಯಿಗಳು ಮತ್ತು ಅರೇಗುಜ್ಜನಹಳ್ಳಿ ಟ್ಯಾಂಕ್ ರೆಸ್ಟೊರೇಷನ್ ಕೆಲಸ ನಮಾರು 9,000 ಎನ್ನುವುದು.

ಶ್ರೀ ಕೆ. ಲಕ್ಕಪ್ಪ.—ನಮ್ಮ ಹಣಕಾಸಿನ ನಚಿವರು, ಮರಾಮತ್ತು ಶಾಖಾ ನಚಿವರು ಹಾಗೂ ಗೃಹ ನಚಿವರು ನಮ್ಮ ತುಮಕೂರು ಜಿಲ್ಲೆಗೆ ಬಂದು ಇಲ್ಲಿ ಅಭಾವಕ್ಕೆ ಒಳಗಾಗಿರುವ ಪ್ರದೇಶ ಗಳಾವುವು ಎನ್ನುವುದನ್ನೆಲ್ಲಾ ಪರಿಶೀಲನೆ ಮಾಡಿ ಒಂದು ಪಟ್ಟಿಯನ್ನು ತಯಾರು ಮಾಡಿಕೊಂಡು ನರಕಾರಕ್ಕೆ ಒದಗಿಸಿ ಇಲ್ಲಿಗೆ ಬೇಕಾಗುವ ಇರಿಗೇಷನ್ನು ಯೋಜನೆಗಳನ್ನೆಲ್ಲಾ ಮಂಜೂರು ಮಾಡುತ್ತೇ ವೆಂದು ಭರವಸೆ ಹೇಳಿ ಬಂದಿದ್ದರೂ ಕೂಡ ಇಲ್ಲಿ ಮಾನ್ಯ ಉಪಮಂತ್ರಿಗಳು ಉತ್ತರ ಕೊಡುವಾಗ ಪದೇ ಪದೇ ಯಾವ ಕೆಲಸಗಳನ್ನೂ ತೆಗೆದುಕೊಂಡು ಇಲ್ಲ ಎನ್ನುವುದು ನರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ನದಸ್ಯರು ನರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಇತ್ತೀಚೆಗೆ ಮಾನ್ಯ ಹಣಕಾಸಿನ ನಚಿವರು, ಮರಾಮತ್ತು ನಚಿವರು ಹಾಗೂ ಗೃಹ ನಚಿವರು ಪ್ರವಾಸ ಮಾಡಿಕೊಂಡು ತುಮಕೂರಿನಿಂದ ಬಂದ ಮೇಲೆ ಈ ತಾಲ್ಲೂಕಿಗೆ ನಂಬಂಧಪಟ್ಟ ಕೆಲಸಗಳನ್ನೆಲ್ಲಾ ಪರಿಶೀಲನೆ ಮಾಡಿ ನುಮಾರು 19 ಲಕ್ಷ ರೂಪಾಯಿಗಳ ಹೊನ ಕೆಲಸಗಳನ್ನೂ ಈಗಾಗಲೇ ಮಾಡಲು ನರಕಾರ ಮಂಜೂರಾತಿ ಕೊಟ್ಟಿದೆ.

ಶ್ರೀ ಕೆ. ಲಕ್ಕಪ್ಪ.—ತುಮಕೂರು ತಾಲ್ಲೂಕಿನಲ್ಲಿ ಬರೀ ವಿರೋಧಪಕ್ಷದ ನದಸ್ಯರುಗಳೇ ಇಲ್ಲಿಗೆ ನದಸ್ಯರಾಗಿ ಆರಿಸಿ ಬಂದಿರುವುದರಿಂದ ನಮ್ಮ ತುಮಕೂರು ಜಿಲ್ಲೆಯ ಕೆಲಸಗಳೆಲ್ಲಾ ಸ್ಥಗಿತವಾಗು ತ್ತಿದೆ ಎನ್ನುವುದು ನರಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ನರಕಾರಕ್ಕೆ ಅಂತಹ ಯಾವ ಭಾವನೆಯೂ ಇಲ್ಲ. ಇದು ಮಾನ್ಯ ನದಸ್ಯರ ತಪ್ಪು ಕಲ್ಪನೆ ಎಂದು ನಾನು ಹೇಳುತ್ತೇನೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಈಗ ಉಳಿದಿರುವ ಕೆಲಸ ಕಾರ್ಯಗಳನ್ನು ಪೂರ್ತಿ ಮಾಡಲು ಇನ್ನೂ ನಿಧಾನವಾಗುತ್ತಿದೆ. ಇಷ್ಟು ತಡವಾಗಲು ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಅನೇಕ ಕಡೆಗಳಲ್ಲಿ ಅಕ್ಟಿಸಿಷನ್ನು ಕೇನುಗಳಿವೆ ಮತ್ತೆ ಕೆಲವು ಕಡೆಗಳಲ್ಲಿ ಕಂಟ್ರಾಕ್ಟರುಗಳ ಅಭಾವದಿಂದಾಗಿ ನಿಧಾನವಾಗುತ್ತಿದೆ. ಈಗ ಆದಷ್ಟು ತ್ವರಿತವಾಗಿ ಇಲ್ಲಿನ ಕೆಲಸಗಳನ್ನು ಮಾಡುತ್ತಿದ್ದೇವೆ. ಈಗಾಗಲೇ ಕೆಲವು ಕೆಲಸಗಳು ಮುಗಿದಿವೆ. ಹೊನ ಕೆಲನ ಗಳಿಗೆಂದು ನುಮಾರು 4·54 ಲಕ್ಷದಷ್ಟು ಹಣ ಕೂಡ ಒದಗಿನಲಾಗಿದೆ.

Channelising irrigation loans through other Land Development Banks.

*Q.—371. Sri P. VENKATAGIRIYAPPA (Kolar).—

Will the Government be pleased to state :—

(*a*) whether Government have taken a decision to channelise all irrigation and other Development loans through Land Development Co-operative Bank ;

(*b*) if so, what is the action taken so far in the matter ?

A.—Sri K. PUTTASWAMY (Minister for Co-operation and Housing).—

(*a*) Government have decided to channelise all irrigation loans through Land Development Banks.

(SRI . PUTTASWAMY)

(*b*) 4,000 wells have been allotted for the State. Divisionwise, Districtwise distribution is made. Applications are being built up and loans have been already sanctioned in 323 cases to the tune of Rs. 12,49,930. First instalment of the loan has been disbursed in 294 cases involving a sum of Rs. 3,44,675.

ಶ್ರೀ ಪಿ. ವೆಂಕಟಗಿರಿಯಪ್ಪ.—ಬಾವಿಗಳಿಗಾಗಿ ಲ್ಯಾಂಡ್ ಮಾರ್ಟ್ಗೇಜ್ ಬ್ಯಾಂಕುಗಳಿಗಾಗಿ ಹಣವನ್ನು ಯಾವ ಆಧಾರದ ಮೇಲೆ ಒದಗಿಸುತ್ತಿದ್ದೀರಿ ?

ಶ್ರೀ ಕೆ. ಪುಟ್ಟಸ್ವಾಮಿ.—ಅಲ್ಲಿನ ಅವಶ್ಯಕತೆಗಳಿಗನುಸಾರವಾಗಿ ನೋಡಿ ಡೆಪ್ಯೂಟಿ ಕಮೀಷನರವರು ಹಂಚುತ್ತಾರೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಬಾವಿಗಳಿಗಾಗಿ ಸಾಲಗಳನ್ನು ಹಂಚುವಾಗ ಜಿಲ್ಲಾವ್ಯೆಸು ಹಂಚುತ್ತಾರೆ. ಆದರೆ ಕೆಲವು ಜಿಲ್ಲೆಗಳಲ್ಲಿ ಕೊಟ್ಟ ಹಣ ಹಂಚದೇ ಹಾಗೇ ಲ್ಯಾಪ್ಸ್ ಆಗುತ್ತಿದೆ. ಅಂತಹ ಹಣವನ್ನು ಇತರ ಕಡೆಗಳಲ್ಲಿ ಅವಶ್ಯಕತೆಗಳು ಹೆಚ್ಚಾಗಿರುವ ಬಾವಿಗಳಿಗಾಗಿ ಹಂಚುವುದರ ಕಡೆಗೆ ಸರಕಾರ ಏತಕ್ಕೆ ಯೋಚನೆ ಮಾಡಬಾರದು ?

ಶ್ರೀ ಕೆ. ಪುಟ್ಟಸ್ವಾಮಿ.—ಈ ವಿಚಾರವನ್ನು ಪರಿಶೀಲನೆ ಮಾಡುತ್ತೇನೆ.

1-00 P. M.

ಶ್ರೀ ಪಿ. ವೆಂಕಟಗಿರಿಯಪ್ಪ.—ಸೆಂಟ್ರಲ್ ಲ್ಯಾಂಡ್ ಮಾರ್ಟ್ಗೇಜ್ ಬ್ಯಾಂಕು ಮಂಜೂರು ಮಾಡಿ ರಿಕಾರ್ಡ್ ಕಳಿಸಿದರೆ ಅದನ್ನು ಇಷ್ಟು ಕಾಲದೊಳಗಾಗಿ ವಾಪಸು ಕಳಿಸಬೇಕೆಂದೇನಾದರೂ ಕಾಲ ನಿಗದಿಮಾಡಲಾಗಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಅದು ಹಳೇ ಮಾತು. ಈಗ ಅರ್ಜಿ ಕೊಟ್ಟ ಎರಡು ತಿಂಗಳೊಳಗಾಗಿ ಸಾಲ ಕೊಡುವ ವ್ಯವಸ್ಥೆ ಮಾಡಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅರ್ಜಿಯನ್ನು ಸ್ಥಳದ ಬ್ಯಾಂಕಿನವರು ಶಿಫಾರ್ಸುಮಾಡಿದ್ದಕ್ಕೆ ಮುಖ್ಯವಾಗಿ ಗಮನಕೊಡುತ್ತೀರೋ ಅಥವ ಜಿಲ್ಲಾಧಿಕಾರಿಗಳ ಶಿಫಾರ್ಸಿಗೆ ಗಮನಕೊಡುತ್ತೀರೋ ?

ಶ್ರೀ ಕೆ. ಪುಟ್ಟಸ್ವಾಮಿ.—ತಾತ್ಕಾಲಿಕವಾಗಿ ಜಿಲ್ಲಾಧಿಕಾರಿಗಳು ಯಾರಿಗೆ ಸಾಲ ಕೊಡಬೇಕೆಂದು ಶಿಫಾರ್ಸುಮಾಡುತ್ತಾರೋ ಅದಕ್ಕೆ ಪ್ರಾಶಸ್ತ್ಯ ಕೊಡಲಾಗುತ್ತಿದೆ. ಕಾರಣ ಈ ಯೋಜನೆಯನ್ನು ನವೆಂಬರ್ ತಿಂಗಳಿನಲ್ಲಿ ಅಭಿವೃದ್ಧಿ ಬ್ಯಾಂಕಿಗೆ ವಹಿಸಲಾಯ್ತು. ಅದುವರೆಗೆ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಪ್ರಕಾರ ಕೆಲವು ಅರ್ಜಿಗಳು ಬಂದಿದ್ದುವು. ಆ ಅರ್ಜಿದಾರರಿಗೆ ತೊಂದರೆ ಆಗಬಾರದೆಂದು ಜಿಲ್ಲಾಧಿಕಾರಿಗಳೇ ಪರಿಶೀಲಿಸಿ ಜಮೀನು ಅಭಿವೃದ್ಧಿ ಬ್ಯಾಂಕಿಗೆ ಕಳುಹಿಸುವಂತೆ ತಿಳಿಸಲಾಗಿದೆ.

ಶ್ರೀ ಬಿ. ಸ್ವೈರಪ್ಪಾಜಿ.—ಈಗ ತಾಲ್ಲೂಕು ಬೋರ್ಡಿನವರು, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನವರು ಮತ್ತು ಜಿಲ್ಲಾಧಿಕಾರಿಗಳು—ಹೀಗೆ ಮೂರು ಕಡೆಗಳಲ್ಲಿ ಸಾಲ ಮಂಜೂರು ಮಾಡುವ ಬಗ್ಗೆ ಲಿಸ್ಟ್ ಮಾಡುವ ವ್ಯವಸ್ಥೆ ಇರುವುದರಿಂದ ತೊಂದರೆಯಾಗಿದೆ. ಅಲ್ಲದೆ ಒಂದು ರೂಪಾಯಿ ಕಂದಾಯವಿದ್ದರೆ 300 ರೂಪಾಯಿಗಳನ್ನು ಸಾಲ ಕೊಡುತ್ತಿದ್ದಾರೆ. ಇದರಿಂದ 10 ಎಕರೆಯೊಳಗೆ ಜಮೀನಿರುವವರಿಗೆ ಸಿಗದೆ ತೊಂದರೆಯಾಗಿದೆ. ಆದುದರಿಂದ ಕಡಮೆ ಜಮೀನಿರುವವರಿಗೆ ಉತ್ತೇಜನ ಕೊಡುವ ದೃಷ್ಟಿಯಿಂದ 1 : 300 ಎಂದಿರುವುದನ್ನು ತಪ್ಪಿಸಿ ಬಡವರಿಗೆ ಸಾಲ ದೊರೆಯುವಂತೆ ಮಾಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು 2—3 ಪ್ರಶ್ನೆ ಹಾಕಿದರು, ಉತ್ತರ ಕೊಡುತ್ತೇನೆ. ಎಲ್ಲೋ ಒಂದರೆಡು ಕಡೆ ಜಿಲ್ಲಾಧಿಕಾರಿಗಳು ಶಿಫಾರ್ಸು ಮಾಡದಿರಬಹುದು, ಅಂಥದ್ದು ಸರಕಾರದ ಗಮನಕ್ಕೆ ಬಂದಿಲ್ಲ. ಆದರೆ ಈ ವರ್ಷಮಾತ್ರ ಜಿಲ್ಲಾಧಿಕಾರಿಗಳು ಬಂದಿರುವ ಅರ್ಜಿಗಳಿಗೆ ಆದ್ಯತೆ

ಕೊಡಬೇಕೆಂದು ತಿಳಿಸಿದೆ. ಹಾಗೆ ಮಾಡಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಕಳಿಸಬಹುದು. ಎರಡನೆಯ ಪ್ರಶ್ನೆ ಕಂದಾಯದಮೇಲೆ ಒಂದಕ್ಕೆ ಮುನ್ನೂರು ಪಟ್ಟು ಬೆಲೆ ಕಟ್ಟುವುದು. ಈಗಿರುವ ರಗ್ಯುಲೇಷನ್ ಪ್ರಕಾರ ಕಂದಾಯದ ಮುನ್ನೂರು ಪಟ್ಟು ಅಥವಾ ಮಾರ್ಕೆಟ್ ವ್ಯಾಲ್ಯು ಎಂದಿದೆ. ಆದರೆ ಮಾರ್ಕೆಟ್ ವ್ಯಾಲ್ಯು ಗೊತ್ತು ಮಾಡಬೇಕಾದರೆ ನಿಧಾನವಾಗುತ್ತದೆ. ಅಲ್ಲದೆ ಬಾವಿಗಳಿಗಾಗುವ ಖರ್ಚಿನಲ್ಲಿ ಅರ್ಧ ಭಾಗ ಹಣ ಬಾವಿ ಕಟ್ಟುವ ಕಡೆ ಕೊಡುವುದರಿಂದ ಸಣ್ಣ ಹಿಡುವಳಿಯವರಿಗೆ ತೊಂದರೆಯಾಗುವುದಿಲ್ಲ.

Mr. SPEAKER.—Question hour is over.

QUESTIONS FOR ANSWERS ON THE DAY

(but not taken up)

Distribution of Foodgrains

*Q.—204. Sri B. J. LINGE GOWDA (Channapatna).—

Will the Government be pleased to state :—

(*a*) the details of foodgrains distributed in the State during the months of September, October and November, 1965 (Districtwar information may be furnished) ;

(*b*) what was the quota allotted to Channapatna Taluk during the above three months ?

*A.—Sri B. D. JATTI (Minister for Food).—

(*a*) *Vide* statement 'A' appended.

(*b*) *Vide* statement 'B' appended.